AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ಧಾರ್ಮಿಕ ಸಾಹಿತ್ಯದ ಹಿನ್ನೆಲೆಯಲ್ಲಿ ಸಾಂಗತ್ಯ ಕಾವ್ಯ.

**ಡಾ. ರತ್ನಪ್ರಭಾ**
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅನೇಕಲ್
ಬೆಂಗಳೂರು ನಗರ ಜಿಲ್ಲೆ
ದೂರವಾಣಿ ಸಂಖ್ಯೆ 8277128825
ಇ.ಮೇಲ್ – rathnaprabha.ss@gmail.com

ಕನ್ನಡ ಸಾಹಿತ್ಯದ ಪ್ರಮುಖವಾದ ಸಾಹಿತ್ಯ ಪ್ರಕಾರಗಳಲ್ಲಿ ಸಾಂಗತ್ಯವೂ ಒಂದು. ಸಾಂಗತ್ಯ ಎನ್ನುವ ಪದಪ್ರಯೋಗ ಸುಮಾರು ಹದಿನೈದನೆಯ ಶತಮಾನದಿಂದಲೇ ಬಳಕೆಗೆ ಬಂದಿದೆ. ಇದು ಅಂಶಗಣ ಪ್ರಧಾನವಾದದ್ದು. ಅದರಲ್ಲೂ ವಿಷ್ಣುಗಣ ಪ್ರಧಾನವಾದುದು. ಇತರ ಸಾಹಿತ್ಯ ಪ್ರಕಾರಗಳಂತೆ ಸಾಂಗತ್ಯವೂ ಕೂಡ ಕನ್ನಡ ಸಾಹಿತ್ಯದಲ್ಲಿ ಸಮೃದ್ಧವಾಗಿ ಬೆಳೆದು ಹೆಮ್ಮರವಾಗಿದೆ.

ಸಾಂಗತ್ಯಕ್ಕೆ ಸಾಂಗತ್ಯ ಎನ್ನುವ ಹೆಸರಲ್ಲದೆ ಸಂಗತಿ (ನೇಮಿಜಿನೇಶಸಂಗತಿ), ಸಂಗೀತ (ರಾಮನ ಸಮಗೀತ), ಪಡುಗಬ್ಬ (ಹಡುಗಬ್ಬ), ಪದಕೃತಿ, ಪದಕವಿತೆ ಪದಸ್ತು ಎಂಬ ಹೆಸರುಗಳೂ ಇವೆ. ಸಾಂಗತ್ಯ ಎಂಬ ಅರ್ಥಪೂರ್ಣವಾದ ಅನ್ವರ್ಥನಾಮವನ್ನು ಕುರಿತು ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯಗಳನ್ನು ನೀಡಿದ್ದಾರೆ.

ಸಾಂಗತ್ಯ ಕಾವ್ಯಗಳು ಸಾಂಗತ್ಯದ ಸರಳ ನಿಯಮಗಳಿಂದ ಎಲ್ಲಾ ಧರ್ಮದ ಕವಿಗಳು ಆಕರ್ಷಿತರಾದರು. ವರ್ಣಕ ಕಾವ್ಯಗಳಿಗೆ ಹೇಳಿ ಮಾಡಿಸಿದಂತಿದ್ದ ಸಾಂಗತ್ಯ ಪ್ರಕಾರ ಬಹಳ ನಿಧಾನವಾಗಿ ರೂಪುಗೊಂಡರೂ ಬಹುಬೇಗ ಜನಪ್ರಿಯವಾಯಿತು. ಸಾಂಗತ್ಯದ ಸರಳ ಶೈಲಿ ಮತ್ತು ಆಡುಭಾಷೆ ಹಾಗೂ ಹೊಸ ಛಂದೋರೂಪದಿಂದ ಆಕರ್ಷಿತರಾದ ಎಲ್ಲಾ ಧರ್ಮದ ಕವಿಗಳು ಸಾಂಗತ್ಯದಲ್ಲಿ ಹೇರಳವಾದ ಕೃತಿಗಳನ್ನು ರಚಿಸಿದರು. ಕೇವಲ 14 ಪದಗಳುಳ್ಳ 'ಗಣ ಸಾಂಗತ್ಯ' ದಿಂದ ಹಿಡಿದು 9969 ಪದ್ಯಗಳುಳ್ಳ ಭರತೇಶ ವೈಭವದಂತಹ ಮಹಾಕಾವ್ಯಗಳು ಸಾಂಗತ್ಯದಲ್ಲಿ ರಚನೆಯಾದವು.

ಸಾಂಗತ್ಯ ಕವಿಗಳಲ್ಲಿ ಕೆಲವರು ರಾಜಾಶ್ರಯ ಪಡೆದು ರಾಜರ ಅಜ್ಞಾನುಸಾರ ಕಾವ್ಯ ರಚಿಸಿದರೆ, ಕೆಲವರು ಸ್ವತಂತ್ರರಾಗಿದ್ದುಕೊಂಡು ಸ್ವಪ್ರೇರಣೆಯಿಂದ ಕಾವ್ಯ ರಚಿಸಿದ್ದಾರೆ. ಕೆಲವು ರಾಜರುಗಳು ಸ್ವತಃ ಕಾವ್ಯ ರಚಿಸಿ ಸ್ವಂತಿಕೆಯನ್ನು ಮೆರೆದಿದ್ದಾರೆ. ಕವಿಯ ಮತಧರ್ಮದ ತತ್ತ್ವವಿಚಾರಗಳಿಗೆ ಹಾಗೂ ಐತಿಹಾಸಿಕ, ಸಾಮಾಜಿಕ, ತಾತ್ವಿಕ, ತಾರ್ಕಿಕ ಮತ್ತು ಆಧ್ಯಾತ್ಮಕ್ಕೆ ಸಂಬಂಧಿಸಿದ ಕಾವ್ಯಗಳು ಹೆಚ್ಚಾಗಿ ರಚನೆಯಾಗಿವೆ. ಜೈನ ಕಾವ್ಯಗಳು ಜೈನಧರ್ಮದ ತತ್ತ್ವ ವಿಚಾರಗಳನ್ನು ಹೇಳಿದರೆ, ವೀರಶೈವ ಕಾವ್ಯಗಳು ವೀರಶೈವ ಧರ್ಮದ ತತ್ತ್ವವಿಚಾರಗಳನ್ನು, ಬ್ರಾಹ್ಮಣ ಕಾವ್ಯಗಳು ವೈದಿಕ ಧರ್ಮದ ತತ್ತ್ವವಿಚಾರಗಳನ್ನು ಪ್ರತಿಪಾದಿಸುತ್ತವೆ. ಸಾಂಗತ್ಯಕ್ಕೆ ಜೈನಕವಿಗಳ ಕೊಡುಗೆ ಅಪಾರವಾದುದು.

## 1. ಜೈನ ಸಾಂಗತ್ಯ ಕಾವ್ಯಗಳು

ಸಾಂಗತ್ಯಕ್ಕೆ ಜೈನಕವಿಗಳ ಕೊಡುಗೆ ಅಪಾರವಾದುದು. ಈ ಪ್ರಕಾರದಿಂದ ಆಕರ್ಷಿತರಾದ ಜೈನಕವಿಗಳು ಜೈನ ಧರ್ಮಕ್ಕೆ ಸಂಬಂಧಿಸಿದ ವಸ್ತು ವಿಷಯ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ವಿಪುಲವಾದ ಕೃತಿಗಳನ್ನು ರಚಿಸಿದ್ದಾರೆ. ತೀರ್ಥಂಕರರ ಚರಿತ್ರೆಗಳು, ಸಾಮಾನ್ಯ ಕೇವಲಿಗಳ ಚರಿತ್ರೆಗಳೂ, ಯಕ್ಷ–ಯಕ್ಷಿಯರ ವಿಷಯವನ್ನೊಳಗೊಂಡ ಕೃತಿಗಳು, ಜೈನರಾಮಾಯಣ, ಮಹಾಭಾರತ ವಿಷಯವನ್ನೊಳಗೊಂಡ ಕಾವ್ಯಗಳು, ತತ್ತ್ವ ಪ್ರಧಾನ ಕಾವ್ಯಗಳು, ಇತಿಹಾಸ ರೂಪದ ಕಾವ್ಯಗಳು, ಶಾಸ್ತ್ರಗ್ರಂಥಗಳು ಹಾಗೂ ಧರ್ಮ ತತ್ತ್ವವನ್ನು ಪ್ರತಿಪಾದಿಸುವ ಶುದ್ಧ ತಾತ್ವಿಕ ಕೃತಿಗಳು ಹಾಗೂ ಧರ್ಮ ಪುರುಷರ ಚರಿತ್ರೆಗಳನ್ನು ರಚಿಸಿದ್ದಾರೆ. 15ನೇ ಶತಮಾನದಿಂದ 19ನೇ ಶತಮಾನದವರೆಗಿನ ಅವಧಿಯಲ್ಲಿ ಜೈನ ಕವಿಗಳ ಕಾವ್ಯಗಳೂ ಸಿಗುತ್ತವೆ.

ಜೈನ ಸಾಂಗತ್ಯ ಕಾವ್ಯಗಳಲ್ಲಿ ಜೈನಧರ್ಮ ಮತ್ತು ಜೈನ ಪರಂಪರೆಯ ಆಚಾರ ವಿಚಾರಗಳ ಪ್ರಭಾವ ಹೆಚ್ಚಾಗಿ ಕಂಡು ಬರುತ್ತದೆ. ಜೈನ ಕವಿಗಳು ಧರ್ಮತತ್ತ್ವವನ್ನು ಪ್ರತಿಪಾದಿಸುವಲ್ಲಿ ನಿಷ್ಠರಾಗಿರುವ ಅಂಶ ತಿಳಿಯುತ್ತದೆ.

## 2. ವೀರಶೈವ ಸಾಂಗತ್ಯ ಕಾವ್ಯಗಳು

15 ನೇ ಶತಮಾನದಿಂದ 19ನೇ ಶತಮಾಣದವರೆಗಿನ ಅವಧಿಯಲ್ಲಿ ವೀರಶೈವ ಕವಿಗಳು ಅಪಾರ ಸಂಖ್ಯೆಯಲ್ಲಿ ಸಾಂಗತ್ಯ ಕೃತಿಗಳನ್ನು ರಚಿಸಿದ್ದಾರೆ. ಶಿವಶರಣರ, ಶಿವಭಕ್ತರ ಚರಿತ್ರೆಗಳನ್ನು, ಚಾರಿತ್ರಿಕ ಸಂಗತಿಗಳನ್ನು, ತಾತ್ವಿಕ ವಿಷಯಗಳನ್ನು ಕುರಿತಂತೆ ಈ ಕೃತಿಗಳು ರಚನೆಯಾಗಿವೆ. ಕೆಲವು ಕಾವ್ಯಗಳಲ್ಲಿ ಕಥೆ ಮತ್ತು ತತ್ತ್ವ ಮೇಳವಿಸಿಕೊಂಡಿದೆ. ಸಾಂಗತ್ಯ ಕ್ಷೇತ್ರಕ್ಕೆ ವೀರಶೈವರ ಕೊಡುಗೆ ಅಪಾರ. ವೀರಶೈವ ಸಾಂಗತ್ಯ ಕೃತಿಗಳನ್ನು ಅನುಕ್ರಮವಾಗಿ ಅನುಬಂಧದಲ್ಲಿ ಹೀಗೆ ಪಟ್ಟಿ ಮಾಡಲಾಗಿದೆ.

ಶಿವನನ್ನು ಬಿಟ್ಟು ಅನ್ಯದೈವವಿಲ್ಲವೆಂಬುದನ್ನು ವೀರಶೈವ ಕವಿಗಳು ಪ್ರತಿಪಾದಿಸಿದ್ದಾರೆ. ವೀರಶೈವ ಕವಿಗಳಿಗೆ ತತ್ತ್ವಕ್ಕಿಂತ ಕಥೆ ಬಹಳ ಮುಖ್ಯ. ಕಥೆಯಿಂದ ತತ್ತ್ವವನ್ನು ಹುಟ್ಟುಹಾಕಿದ್ದಾರೆ. ಅವನ್ನು ಜನರು ಅನುಸರಿಸಬೇಕೆಂಬುದು ಅವರ ನಿಲುವು. ಶಿವಭಕ್ತರಲ್ಲಿ ಒಬ್ಬೊಬ್ಬನ ಚರಿತ್ರೆಯನ್ನು ಕವಿ ಆರಿಸಿಕೊಂಡಿದ್ದರೂ ಅದು ಶರಣರೆಲ್ಲರಿಗೂ ಸಂಬಂಧಿಸಿದ್ದು ಎಂಬಂತೆ ಭಾವಿಸಿದ್ದಾರೆ. ಒಬ್ಬನೇ ಶರಣನ ಕಥೆಯಲ್ಲಿ ಅಸಂಖ್ಯಾತ ಶರಣರ ಹೆಸರುಗಳನ್ನು ಉಲ್ಲೇಖಿಸಿದ್ದಾರೆ.

**3. ಬ್ರಾಹ್ಮಣ ಸಾಂಗತ್ಯ ಕಾವ್ಯಗಳು :**

16 ನೇ ಶತಮಾನದಿಂದ 19ನೇ ಶತಮಾನದವರೆಗಿನ ಅವಧಿಯಲ್ಲಿ ಬ್ರಾಹ್ಮಣ ಕವಿಗಳು ಸಾಂಗತ್ಯ ಕೃತಿಗಳನ್ನು ರಚಿಸಿದ್ದಾರೆ. ಜೈನ ವೀರಶೈವರ ಸಾಂಗತ್ಯ ಕೃತಿಗಳೀಗೆ ಹೋಲಿಸಿದರೆ ಇವರ ಕೃತಿಗಳು ಕಡಿಮೆ ಸಂಖ್ಯೆಯಲ್ಲಿವೆ. 15ನೇ ಶತಮಾನದಲ್ಲಿ ಒಬ್ಬ ಬ್ರಾಹ್ಮಣ ಕವಿಯೂ ಕಾವ್ಯ ರಚಿಸಿಲ್ಲವೆಂಬುದು ಗಮನಾರ್ಹ ಅಂಶ. ಜೈನರು ಜಿನನನ್ನು, ವೀರಶೈವರು ಶಿವನನ್ನು ಕುರಿತು ಕೃತಿ ರಚಿಸಿದಂತೆ, ಬ್ರಾಹ್ಮಣರು ಹರಿಯನ್ನು ಕುರಿತು ಕಾವ್ಯ ರಚಿಸಿದ್ದಾರೆ. ವಿಷ್ಣು ಅಥವಾ ಕೃಷ್ಣನ ಲೀಲೆಗಳು, ವಿಲಾಸ ವರ್ಣನೆಗಳನ್ನು ವಸ್ತುವಾಗಿಸಿಕೊಂಡಿದ್ದಾರೆ. ಮಹಾಭಾರತದಿಂದ ರಸಪೂರ್ಣ ಭಾಗಗಳನ್ನು ಎತ್ತಿಕೊಂಡು ಕಾವ್ಯ ರಚಿಸಿದ್ದಾರೆ. ತಾತ್ವಿಕ ಕಾವ್ಯಗಳಲ್ಲಿ ಅದ್ವೈತ ತತ್ತ್ವದ ನೀತಿಗಳ ವಿವರಣೆಯಿದೆ.

**4. ಇತರೇ ಜಾತಿ ಕವಿಗಳ ಸಾಂಗತ್ಯ ಕಾವ್ಯಗಳು:**

ಜೈನ, ವೀರಶೈವ, ಬ್ರಾಹ್ಮಣರಲ್ಲದೇ ಇತರೇ ವರ್ಗಗಳಿಗೆ ಸೇರಿದ ಕವಿಗಳೂ ಕೂಡ ಸಾಂಗತ್ಯದಲ್ಲಿ ಕಾವ್ಯ ರಚಿಸಿದ್ದಾರೆ. ಇವರ ಸಂಖ್ಯೆ ಅತ್ಯಂತ ಕಡಿಮೆ. 16ನೇ ಶತಮಾನದಿಂದ 18ನೇ ಶತಮಾನದವರೆಗಿನ ಅವಧಿಯಲ್ಲಿ ಇವರ ಕಾವ್ಯಗಳು ರಚನೆಯಾಗಿವೆ.

15ನೇ ಶತಮಾನ ಸಾಂಗತ್ಯದ ಉದಯಕಾಲ. ಈ ಶತಮಾನದಲ್ಲಿ 21 ಸಾಂಗತ್ಯ ಕೃತಿಗಳು ರಚನೆಯಾಗಿವೆ. ಇದರಲ್ಲಿ ಜೈನ ಕೃತಿಗಳ ಸಂಖ್ಯೆಯೇ ದೊಡ್ಡದು. ಸುಮಾರು 10 ಜನ ಜೈನ ಕವಿಗಳು 17 ಕೃತಿಗಳನ್ನು ರಚಿಸಿದ್ದಾರೆ. ನಾಲ್ಕು ಕೃತಿಗಳನ್ನು ರಚಿಸಿದ್ದಾರೆ. 16, 17ನೇ ಶತಮಾನ ಸಾಂಗತ್ಯದ ಉನ್ನತಿಯ ಕಾಲ, 16ನೇ ಶತಮಾನದಲ್ಲಿ ಸುಮಾರು 37 ಜನ ಕವಿಗಳು 45 ಕೃತಿಗಳನ್ನು ರಚಿಸಿದ್ದಾರೆ. ಈ ಶತಮಾನದಲ್ಲಿ ವೀರಶೈವ ಕವಿಗಳೇ ಹೇರಳವಾಗಿ ಕೃತಿ ರಚನೆ ಮಾಡಿದ್ದಾರೆ. 20 ಜನ ವೀರಶೈವ ಕವಿಗಳು 22 ಕೃತಿಗಳನ್ನು ರಚಿಸಿದ್ದಾರೆ. 15 ಜೈನ ಕವಿಗಳು 18 ಕೃತಿಗಳನ್ನು ರಚಿಸಿದ್ದಾರೆ. 3 ಜನ ಬ್ರಾಹ್ಮಣ ಕವಿಗಳೂ 3 ಕೃತಿಗಳನ್ನು ಇತರರು 2 ಕೃತಿಗಳನ್ನು ರಚಿಸಿದ್ದಾರೆ.

17ನೇ ಶತಮಾನದಲ್ಲಿ ಸುಮಾರು 78 ಕವಿಗಳಿಂದ ದಾಖಲೆಯ ನೂರು ಕೃತಿಗಳು ರಚನೆಯಾಗಿವೆ. ಇವುಗಳಲ್ಲಿ 21 ಜೈನ ಕವಿಗಳಿಂದ 22 ಕೃತಿಗಳು, 43 ವೀರಶೈವ ಕವಿಗಳಿಂದ 52 ಕೃತಿಗಳು, 11 ಬ್ರಾಹ್ಮಣ ಕವಿಗಳಿಂದ 23 ಕೃತಿಗಳು, ಇತರ ವರ್ಗದವರಿಂದ ಮೂರು ಕೃತಿಗಳು ರಚನೆಯಾಗಿವೆ. 18ನೇ ಶತಮಾನದಲ್ಲಿ ಸುಮಾರು 41 ಕವಿಗಳಿಂದ 51 ಕೃತಿಗಳು ರಚನೆಗೊಂಡಿವೆ. 9 ಜೈನ ಕವಿಗಳಿಂದ 17 ಕೃತಿಗಳು, 20 ವೀರಶೈವ ಕವಿಗಳಿಂದ 20 ಕೃತಿಗಳು, 11 ಜನ ಬ್ರಾಹ್ಮಣ ಕವಿಗಳಿಂದ 13 ಕೃತಿಗಳು, ಇತರ ವರ್ಗದ ಕವಿಯಿಂದ ಒಂದು ಕೃತಿಯೂ ರಚನೆಯಾಗಿದೆ. 19ನೇ ಶತಮಾನ ಸಾಂಗತ್ಯದ ಇಳಿಮುಖದ ಕಾಲ. ಈ ಶತಮಾನದಲ್ಲಿ 21 ಕವಿಗಳಿಂದ 34 ಸಾಂಗತ್ಯ ಕೃತಿಗಳು ರಚನೆಯಾಗಿವೆ. ಇದರಲ್ಲಿ ಇಬ್ಬರು ಜೈನ ಕವಿಗಳು 13 ವೀರಶೈವ ಕವಿಗಳು 13 ಕೃತಿಗಳನ್ನು, 8 ಜನ ಬ್ರಾಹ್ಮಣ ಕವಿಗಳೂ 8 ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯದ ಸಮಗ್ರ ಓದಿಗೆ ಸಾಂಗತ್ಯ ಕೃತಿಗಳ ಕೊಡುಗೆ ದೊಡ್ಡದು.

**ಪರಾಮರ್ಶನ ಗ್ರಂಥಗಳು**

1. ಡಾ. ಡಿ. ಎಸ್. ಕರ್ಕಿ– ಕನ್ನಡ ಛಂದೋವಿಕಾಸ, 1977
2. ರಂ. ಶ್ರೀ ಮುಗಳಿ– ಕನ್ನಡ ಸಾಹಿತ್ಯ ಚರಿತ್ರೆ, 1984
3. ಎ. ವೆಂಕಟಸುಬ್ಬಯ್ಯ– ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ– 1927
4. ಟಿ.ವಿ.ವೆಂಕಟಾಚಲ ಶಾಸ್ತ್ರಿ– ಕನ್ನಡ ಛಂದಸ್ಸು– ಪುಟ 88–89,1976